**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 228/2021**

**ಚಾ.ಸಾ.** 9

**ಪ್ರಾ.ಸಾ.** 4

**ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ವಿಜಯ ಬಿರಾದರ |
| ತಂದೆಃ ಗಂಡನ ಹೆಸರು | ಬಸನಗೌಡ |
| ಉದ್ಯೋಗ | ಡಿ ಎಸ್ ಪಿ ಕರ್ನಾಟಕ ಲೋಕಾಯುಕ್ತ |
| ವಯಸ್ಸು | 49 ವರ್ಷ |
| ವಾಸಸ್ಥಳ | ಗದಗ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 26.07.2017 ರಿಂದ ದಿಃ 18.01.2021 ರವರೆಗೆ ಕಲಘಟಗಿ ಪೊಲೀಸ ಠಾಣೆ ಆರಕ್ಷಕ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 08.12.2020 ರಂದು ಚಾಸಾ-8 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ದಿಃ 09.12.2020 ರಂದು ಚಾಸಾ-5 ರವರ ಮುಖಾಂತರ ಎಫ್ ಎಸ್ ಎಲ್ ಧಾರವಾಡದವರ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 26.12.2020 ರಂದು ಈ ಪ್ರಕರಣದಲ್ಲಿ ಜಪ್ತಾದ ಕೆ ಎ 27/ಇ ವಿ 0910 ಇದನ್ನು ಕಲಘಟಗಿ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರಿಸಲು ಡಿ ಸಿ ಅಬಕಾರಿ ಇಲಾಖೆಯವರು ನೀಡಿದ ಆದೇಶವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆ. ದಿಃ 28.12.2020 ರಂದು ಸದರಿ ಬೈಕನ್ನು ಕಲಘಟಗಿ ಅಬಕಾರಿ ಇಲಾಖೆಯವರಿಗೆ ಹಸ್ತಾಂತರಿಸಿದೆ. ದಿಃ

31.12.2020 ರಂದು ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾಗಿರುವ ಕಾರಣ ಅಂತಿಮ ವರದಿಯನ್ನು ತಯಾರಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ9 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಡಿ ಸಿ ರವರಿಂದ ಸ್ವೀಕರಿಸಿದ ಸೂಚನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ10 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಸದರಿ ಆದೇಶದ ಪ್ರಕಾರ ಜಪ್ತಾದ ಬೈಕನ್ನು ಡಿ ಸಿ ಅಬಕಾರಿ ನಿರೀಕ್ಷರಿಗೆ ಹಸ್ತಾಂತರಿಸಿದ ಪತ್ರವನ್ನು  ನೋಡಿ ಗುರುತಿಸಿದ್ದು ಅದನ್ನು ನಿಪಿ11 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 43 ಟೆಟ್ರಾ ಪಾಕೇಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟು ಮು.ಮಾ.1 ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು, ಸದರಿ ವ್ಯಕ್ತಿಯು ಹೆಸರು ದೇವರಾಜ ದೊಡ್ಡಪ್ಪ ಲಮಾಣಿ ಎಂದು ಈ ಪ್ರಕರಣದ ಆರೋಪಿ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ  ಅಪಾದಿತನ  ಪರ ಶ್ರೀ ಕೆ ಬಿ ಜಿ ವಕೀಲರಿಂದ**

ತನಿಖಾ ಕಾಲದಲ್ಲಿ ನಾನು ಗುನ್ನಾ ಸ್ಥಳಕ್ಕೆ ಹೋಗಿ ನೋಡಿಲ್ಲ. ಚಾಸಾ-1 ರವರ ದೂರಿನ ಆಧಾರದ ಮೇಲೆ ನಾನು ಈ ಪ್ರಕರಣದ ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿ. ದಿಃ 16.05.2020 ರಂದು ಕೋವಿಡ ಸಾಕ್ರಾಮಿಕ ರೋಗ ಪ್ರಯುಕ್ತ ಇಡಿ ದೇಶ ಬಂದು ಇತ್ತು ಎಂದರೆ ಸಾಕ್ಷಿಯು ತನಗೆ ಖಚಿತ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕೋವಿಡ ಸಾಕ್ರಾಮಿಕ ರೋಗ ಇದ್ದ ವೇಳೆಯಲ್ಲಿ ಜನರು ಮನೆಯಿಂದ ಹೊರಗಡೆ ಬರಲು ಹೆದರುತ್ತಿದ್ದರು ಎಂದರೆ ಸರಿ. ಕೆಲವೊಂದು ಅವಧಿ ಮತ್ತು ಸ್ಥಳಗಳಲ್ಲಿ ಮದ್ಯ ಮಾರಾಟ ಮಾಡಲು ನಿರ್ಬಂಧ ಮತ್ತು ನಿಷೇಧ ಇತ್ತು ಎಂದರೆ ಸರಿ. ದಿಃ 16.05.2020 ರಂದು

ಆರೋಪಿಯು ವಾಹನ ಮೇಲೆ ಮದ್ಯವನ್ನು ತೆಗೆದುಕೊಂಡು ಹೋಗುತ್ತಿದ್ದು ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣದ ದೂರು ಮತ್ತು ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಲ್ಪಟಿದೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಈ ಪ್ರಕರಣದ ದಾಖಲಾತಿಗಳನ್ನು ತಯಾರಿ ಅಂತಿಮ ವರದಿಯಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ದ್ವಿಚಕ್ರದ ವಾಹನ ಮೇಲೆ ಸುಳ್ಳು ಪ್ರಕರಣದ ಹೂಡಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**